## ಕನ್ನಡದಲ್ಲಿ ಧಾರಾವಾಹಿಗಳ ಕೊರತೆಯೇ?

‘ಸಂಧ್ಯಾರಾಗಂ’, ‘ಅಗ್ನಿ ಪರೀಕ್ಷೆ’, ‘ತ್ರಿನಯನಿ’, ‘ಪುನರ್‌ವಿವಾಹ’ ಮತ್ತು ‘ನಾಗಪಂಚಮಿ’ ಬೇರೆ ಭಾಷೆಗಳಿಂದ ಕನ್ನಡಕ್ಕೆ ಡಬ್ ಆಗಿವೆ. ಇದು ಕನ್ನಡದಲ್ಲಿ ಧಾರಾವಾಹಿಗಳ ಕೊರತೆಯ ಸಂಕೇತವೋ, ಕನ್ನಡಿಗರು ಡಬ್ ಸೀರಿಯಲ್ ಸ್ವಾಗತಿಸುತ್ತಿದ್ದಾರೆ ಎಂದರ್ಥವೋ ಅಥವಾ ಕನ್ನಡ ನಿರ್ಮಾಣದ ಹಿನ್ನಡೆಯೋ? ಈ ಡಬ್ಬಿಂಗ್ ಪಿಡುಗು ಝೀ ಕನ್ನಡ ಮತ್ತು ಸ್ಟಾರ್ ಸುವರ್ಣ ಮಾತ್ರವಲ್ಲ. ಬಹುತೇಕ ಎಲ್ಲ ವಾಹಿನಿಗಳಿಗೂ ಹಬ್ಬುತ್ತಿರುವುದು ಆಶ್ಚರ್ಯ. ಕನ್ನಡದ ಕೆಲ ಕಥೆಗಳಿಗೆ ದಿಢೀರ್ ಎಂದು ಮಂಗಳ ಹಾಡುತ್ತಿದ್ದಾರೆ.

—ರಮಾ ಆನಂದ, ಬೆಂಗಳೂರು

ವಾರದ ಪತ್ರ

### ಸಾಧಕರ ನಿರ್ಣಯ: ವಿವೇಚನೆ ಅಗತ್ಯ

ಝೀ ಕನ್ನಡದ ‘ವೀಕ್ ಎಂಡ್ ವಿತ್ ರಮೇಶ್’ ಕಾರ್ಯಕ್ರಮದಲ್ಲಿ ‘ಸಾಧಕರು’ ಎಂದು ಬಿಂಬಿಸುತ್ತಿರುವವರಲ್ಲಿ ಬಹಳಷ್ಟು ಮಂದಿ ಚಲನಚಿತ್ರ ಕ್ಷೇತ್ರದ ಕಲಾವಿದರೇ ಆಗಿದ್ದಾರೆ. ಈಗ ಬೇರೆ ಬೇರೆ ಕ್ಷೇತ್ರಗಳ ವ್ಯಕ್ತಿಗಳೂ ಈ ಸಾಧಕರ ಪೀಠದಲ್ಲಿ ಆಸೀನರಾಗುತ್ತಿರುವುದು ಸ್ತುತ್ಯರ್ಹವಾದರೂ, ಕೆಲವರ ಬಗ್ಗೆ ಪ್ರಶ್ನಾರ್ಥಕ ಚಿಹ್ನೆ ಮೂಡುವುದು ಖಂಡಿತ. ಹೀಗೇ ಆದರೆ ನಿರಾಸಕ್ತಿ ಖಚಿತ.

—ಹೆಚ್.ವಿ. ಶ್ರೀಧರ್, ಬೆಂಗಳೂರು



## ಮಕ್ಕಳೊಂದಿಗಿನ ಮಾತು ಸಹಜವಾಗಿರಲಿ

ಝೀ ಕನ್ನಡದ ‘ಛೋಟಾ ಚಾಂಪಿಯನ್’ನಲ್ಲಿ ನಿರೂಪಕಿ ಚಿಕ್ಕಮಕ್ಕಳನ್ನು ಬಹುವಚನದಲ್ಲಿ ಮಾತನಾಡಿಸುವುದು ಮುಜುಗರ ಹಾಗೂ ಕೃತಕ ಎಂದು ಎನಿಸುತ್ತದೆ. ಅದರ ಬದಲಿಗೆ ಸಹಜವಾಗಿ ಚಿನ್ನೂ, ಬಾಮ್ಮ, ಬಾಪ್ಪ ಹೀಗೆ ಕರೆದರೆ ಸೊಗಸು ಹೆಚ್ಚುತ್ತದೆ.

—ಸುಬ್ಬಲಕ್ಷ್ಮಿ ಹೆಚ್.ಕೆ., ಕೋಲಾರ

## ಮತ್ತೆ ಪುನೀತ್ ಪರ್ವ

ಪುನೀತ್ ರಾಜ್‌ಕುಮಾರ್ ಅಕಾಲಿಕವಾಗಿ ನಮ್ಮನ್ನಗಲಿದ ನಂತರ ಎಲ್ಲ ವಾಹಿನಿಗಳೂ ಪೈಪೋಟಿ ಎಂಬಂತೆ ಹೆಚ್ಚೂ ಕಡಿಮೆ ವರ್ಷದಷ್ಟು ಕಾಲ ಪವರ್ ಸ್ಟಾರ್ ಕುರಿತ ಕಾರ್ಯಕ್ರಮಗಳನ್ನೇ ಬಿತ್ತರ ಮಾಡಿದವು. ಚಂದನ ವಾಹಿನಿ ‘ಮರೆಯದ ಮಾಣಿಕ್ಯ’ ಎಂಬ ಸಂಚಿಕೆಯನ್ನು ಹಲವು ಕಂತುಗಳಲ್ಲಿ ಪ್ರಸಾರ ಮಾಡಿತು. ಈಗ ಚಂದನದಲ್ಲಿ ಪುನೀತ್ ಕುರಿತಾದ ‘ಯುವರತ್ನನ ನಾದ ಪಯಣ’ ಪ್ರಾರಂಭವಾಗಿದೆ. ಮುಂಚೆ ಇದೇ ಸಮಯದಲ್ಲಿ ‘ಮಧುರ ಮಧುರವೀ ಮಂಜುಳಗಾನ’ ಎಂಬ ಕಾರ್ಯಕ್ರಮ ಪ್ರಸಾರವಾಗುತ್ತಿತ್ತು. ಹಳೆಯ ಗೀತೆಗಳ ಸುಶ್ರಾವ್ಯ ಸುಮಧುರ ಗಾಯನ, ಇಂಪಾದ ಸಂಗೀತ, ಅರ್ಥಗರ್ಭಿತ ಸಾಹಿತ್ಯ ರಚನೆಗಳ ಸಮ್ಮಿಲನ ಮನಸ್ಸಿಗೆ ಮುದ ನೀಡುತ್ತಿತ್ತು. ಕನ್ನಡ ಚಲನಚಿತ್ರ ರಂಗದ ಎಲ್ಲ ಕ್ಷೇತ್ರಗಳ ಕಲಾವಿದರನ್ನೊಳಗೊಂಡ ವೈವಿಧ್ಯಮಯ ಕಾರ್ಯಕ್ರಮ ಇದಾಗಿತ್ತು. ಈಚೀಚೆಗೆ ಏಕತಾನತೆಯಿಂದ ಬೇಸರ ತರಿಸುತ್ತಿವೆ.

—ಹೆಚ್.ವಿ. ಶ್ರೀಧರ್, ಬೆಂಗಳೂರು

## ಮನರಂಜನೆ ಪಕ್ಕಾ ‘ಗ್ಯಾರಂಟಿ’

ಚುನಾವಣೆ ಮುಗಿದು ಹೊಸ ಸರ್ಕಾರವೂ ಬಂದಾಯಿತು. ಸುದ್ದಿ ವಾಹಿನಿಗಳ ಭಯಂಕರ ಅಬ್ಬರ ಕಡಿಮೆ ಆಗುತ್ತೆ ಅಂದುಕೊಳ್ಳುವ ಹೊತ್ತಿಗೆ ಸರಿಯಾಗಿ ‘ಗ್ಯಾರಂಟಿ’ ಗಲಾಟೆ ಶುರುವಾಗಿದೆ. ಪೈಪೋಟಿಗೆ ಬಿದ್ದವರಂತೆ ‘ಪಕ್ಕಾ ಗ್ಯಾರಂಟಿ’ ಸುದ್ದಿಗಳನ್ನು ಭಿನ್ನ ವಿಭಿನ್ನ ರೀತಿ ಪ್ರಸಾರ ಮಾಡುತ್ತಿದ್ದಾರೆ. ವೀಕ್ಷಕರು ಪ್ರತಿ ದಿನ ರಾತ್ರಿ ಹಂಡ್ರೆಡ್ ಪರ್ಸೆಂಟ್ ಗ್ಯಾರಂಟಿ ಸುದ್ದಿ ಕೊಟ್ಟೇ ಕೊಡ್ತಾರೆ ಅಂತಾ ಗ್ಯಾರಂಟಿ ನಂಬಿಯೇ ಬಿಟ್ಟರು. ನಿಜಕ್ಕೂ ಸುದ್ದಿ ಗ್ಯಾರಂಟಿಯೇ ಎಂಬುದು ಗೊತ್ತಿಲ್ಲ ಎನ್ನುವುದು ಅವರಿಗೆ ಗ್ಯಾರಂಟಿಯಾಗಿದೆ. ವಾಹಿನಿಗಳ ಗ್ಯಾರಂಟಿಗಳಿಗೆ ಯಾವ ‘ಷರತ್ತುಗಳು’ ಅನ್ವಯ ಆಗುವುದಿಲ್ಲವೇ?

—ಆರ್. ವೀರೇಶ್ ಕುಮಾರ್, ಬೆಂಗಳೂರು

## ಎಲ್ಲಿ ಹೋದರು ಇವರು?

‘ಮಗಳು ಜಾನಕಿ’ ಧಾರಾವಾಹಿಯಲ್ಲಿ ಜಾನಕಿ ಪಾತ್ರದಲ್ಲಿದ್ದ ಗಾನವಿ ಲಕ್ಷ್ಮಣ್, ‘ಕನ್ನಡತಿ’ಯಲ್ಲಿ ಹರ್ಷ ಮತ್ತು ಭುವಿ ಪಾತ್ರವನ್ನು ನಿರ್ವಹಿಸಿದ ಕಿರಣ್ ರಾಜ್ ಮತ್ತು ರಂಜನಿ ರಾಘವನ್ ಅವರಿಗೆ ಧಾರಾವಾಹಿ ವೀಕ್ಷಕರಲ್ಲಿ ಅಪಾರ ಅಭಿಮಾನಿಗಳು ಇದ್ದರು. ಈ ಧಾರಾವಾಹಿಗಳು ಜನಪ್ರಿಯವಾಗಿದ್ದವು. ಆದರೆ, ಜನಪ್ರಿಯತೆ ಹೊರತಾಗಿಯೂ ಅವರು ಈ ಧಾರಾವಾಹಿಗಳ ನಂತರ ಬೇರೆ ಧಾರಾವಾಹಿಗಳಲ್ಲಿ ಕಾಣಿಸಿಕೊಳ್ಳಲಿಲ್ಲ. ಅವರು ನಟಿಸಿದ ಸಿನಿಮಾಗಳು ಅಂತಹ ಯಶಸ್ವಿಯಾಗಲಿಲ್ಲ. ಕಿರಣ್ ರಾಜ್ ಮತ್ತು ರಂಜನಿ ರಾಘವನ್ ಅವರ ಹೊಸ ಧಾರಾವಾಹಿ ಬರಬಹುದೆಂದು ನಿರೀಕ್ಷಿಸುತ್ತಿದ್ದೇವೆ.

—ರಮಾನಂದ ಶರ್ಮಾ, ನವದೆಹಲಿ

## ಕಥೆ ಎಳೆಯಬೇಡಿ

ಝೀ ಕನ್ನಡದ ‘ಶ್ರೀರಸ್ತು ಶುಭಮಸ್ತು’ ಚೆನ್ನಾಗಿ ಮೂಡಿಬರುತ್ತಿದೆ. ಬಹುತೇಕ ಪಾತ್ರಧಾರಿಗಳ ಅಭಿನಯ ಸೊಗಸಾಗಿದೆ. ಅದರಲ್ಲೂ ದತ್ತ ಪಾತ್ರ ಮನಮುಟ್ಟುವ ಹಾಗೆ ಅಭಿನಯಿಸಿದ್ದಾರೆ. ಕಥೆಯನ್ನು ಅನಗತ್ಯವಾಗಿ ಎಳೆಯಬೇಡಿ. ಸಿರಿ ಪತಿ ಪಾತ್ರವನ್ನು ಬದಲಿಸಿರುವುದು ಸರಿ ಎಂದು ಅನ್ನಿಸುತ್ತಿಲ್ಲ. ಹೊಸ ಕಲಾವಿದರಿಗೆ ಆ ಪಾತ್ರ ಹೊಂದಿಕೆಯಾಗುವುದಿಲ್ಲ. ಯಾವುದೇ ಪಾತ್ರವನ್ನು ಬದಲಿಸುವಾಗ ವಿಕ್ಷಕರ ಮನಸ್ಥಿತಿಯನ್ನೂ ಧಾರಾವಾಹಿಯನ್ನು ನಿರ್ಮಿಸುವವರು ಪರಿಗಣಿಸುವುದು ಸೂಕ್ತ.

—ಮೇಘನಾ ರಘುನಂದನ್, ಹೂವಿನ ಹಡಗಲಿ;
ರವಿಕಾಂತ ದೇಶಪಾಂಡೆ, ವಿಜಯಪುರ

## ದೇವರ ವರ

ಸ್ಟಾರ್ ಸುವರ್ಣದಲ್ಲಿ ‘ನೀನಾದೆ ನಾ’ ಹೊಸದಾಗಿ ಆರಂಭವಾಗಿದೆ. ಹೆಣ್ಣಿಗೊಂದು ಗಂಡು ಎಂದು ಬ್ರಹ್ಮ ಬರೆದಿರುತ್ತಾನೆ ಎಂಬ ನಂಬಿಕೆ ಇದೆ. ಅದೇ ಈ ಕಥೆಯ ಮುಖ್ಯ ಅಂಶ. ಯುವತಿಯೊಬ್ಬಳಿಗೆ ದೇವರ ಆಶೀರ್ವಾದದಿಂದ ತಾಳಿಯನ್ನು ಕಟ್ಟಿಸುವ ದೃಶ್ಯ ಬರುತ್ತದೆ. ಇದನ್ನು ನೋಡಿದಾಗ ಕುತೂಹಲ ಹುಟ್ಟಿತು.

ಚಂದನದಲ್ಲಿ ‘ಮರೆಯದ ಮಾಣಿಕ್ಯ’ ಕಾರ್ಯಕ್ರಮದಲ್ಲಿ ಉತ್ತಮ ಗಾಯಕರ ಗೀತೆಗಳನ್ನು ಕೇಳುವ ಅವಕಾಶ ನಮಗೆ ಸಿಕ್ಕಿದೆ. ಹೀಗೆ ಚಂದನ ವಾಹಿನಿ ಒಳ್ಳೆಯ ಗಾಯಕರಿಗೆ ಅವಕಾಶ ಮಾಡಿಕೊಡಲಿ. ಸಿನಿಮಾ ಹಾಡುಗಳ ಜೊತೆಗೆ ಭಾವಗೀತೆ, ಭಕ್ತಿಗೀತೆಗೂ ಅವಕಾಶ ಕಲ್ಪಿಸಲಿ.

—ಬಸಪ್ಪ ಎಸ್. ಮುಳ್ಳೂರ, ಹಲಗತ್ತಿ